Akashvani: Bangalore
National Bulletin In Kannada
22.10.2025 : 7.35hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

22.10.2025 : 7.35hrs

*******

ಮುಖ್ಯಾಂಶಗಳು

೧. ಆಪರೇಷನ್ ಸಿಂದೂರದಲ್ಲಿ ಅಸಾಧಾರಣ ಶೌರ್ಯ ತೋರಿದ ಸೇನಾನಿಗಳಿಗೆ ಶೌರ್ಯ ಪ್ರಶಸ್ತಿ ಪ್ರಕಟ

೨. ಬಿಹಾರ ವಿಧಾನಸಭಾ ಚುನಾವಣೆ: ಅಂತಿಮ ಹಂತದ ನಾಮಪತ್ರಗಳ ಪರಿಶೀಲನೆ ಕಾರ್ಯ ಪೂರ್ಣ

೩. ಉಡಾನ್ ಯೋಜನೆಯಿಂದ ಕಳೆದ ಒಂಬತ್ತು ವರ್ಷಗಳಲ್ಲಿ ೧.೫೬ ಕೋಟಿಗೂ ಹೆಚ್ಚು ಪ್ರಯಾಣಿಕರಿಗೆ ಅನುಕೂಲ

೪. ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್: ಪಾಕಿಸ್ತಾನ ವಿರುದ್ಧ ದಕ್ಷಿಣ ಆಫ್ರಿಕಾ ತಂಡಕ್ಕೆ ೧೫೦ ರನ್‌ಗಳ ಜಯ

><><><><

ಆಪರೇಷನ್ ಸಿಂದೂರ ಸೇರಿದಂತೆ ವಿವಿಧ ಕಾರ್ಯಾಚರಣೆಗಳಲ್ಲಿ ಅಸಾಧಾರಣ ಧೈರ್ಯವನ್ನು ಪ್ರದರ್ಶಿಸಿದ ರಕ್ಷಣಾ ಸಿಬ್ಬಂದಿಗೆ ನೀಡಲಾಗುವ ಶೌರ್ಯ ಪ್ರಶಸ್ತಿಗಳ ಉಲ್ಲೇಖಗಳನ್ನು ಕೇಂದ್ರ ಸರ್ಕಾರ, ಗೆಜೆಟ್ ಅಧಿಸೂಚನೆಯಲ್ಲಿ ಪಟ್ಟಿ ಮಾಡಿದೆ. ಗೆಜೆಟ್‌ನಲ್ಲಿ ಸೇರಿಸಲಾದ ಉಲ್ಲೇಖಗಳು ಮುಖ್ಯವಾಗಿ ಭಾರತೀಯ ವಾಯುಪಡೆ ಮತ್ತು ಭಾರತೀಯ ಸೇನಾ ಸಿಬ್ಬಂದಿಗೆ ಸೇರಿವೆ. ಭಾರತೀಯ ಸೇನೆಯ ಸಾಂಪ್ರದಾಯಿಕ ಸಮರ ನೀತಿಯನ್ನು ಪ್ರತಿಬಿಂಬಿಸುವ ಅಸಾಧಾರಣ ಶೌರ್ಯ ಮತ್ತು ಧೈರ್ಯವನ್ನು ಪ್ರದರ್ಶಿಸಿದ್ದಕ್ಕಾಗಿ ಕರ್ನಲ್ ಕೋಶಾಂಕ್ ಲಂಬಾ ಅವರಿಗೆ ವೀರ ಚಕ್ರ ನೀಡಲಾಗಿದೆ. ಮತ್ತೊಬ್ಬ ವೀರ ಚಕ್ರ ಪ್ರಶಸ್ತಿ ಪುರಸ್ಕೃತರು ಲೆಫ್ಟಿನೆಂಟ್ ಕರ್ನಲ್ ಸುಶೀಲ್ ಬಿಶ್ತ್. ಆಪರೇಷನ್ ಸಿಂದೂರ ಸಮಯದಲ್ಲಿ ಲೆಫ್ಟಿನೆಂಟ್ ಕರ್ನಲ್ ಬಿಶ್ತ್ ಅಸಾಧಾರಣ ಧೈರ್ಯ, ನಾಯಕತ್ವ ಮತ್ತು ಕಾರ್ಯಾಚರಣೆಯ ಪ್ರತಿಭೆಯನ್ನು ಪ್ರದರ್ಶಿಸಿದರು. ಭಯೋತ್ಪಾದಕ ಶಿಬಿರಗಳ ಸಂಪೂರ್ಣ ನಾಶ ಮಾಡುವ ಮೂಲಕ ಅದ್ಭುತ ಯಶಸ್ಸಿಗೆ ಕಾರಣರಾದರು. ಪೂರ್ವ ನಿಗದಿತ ಗುರಿಗಳ ವಿರುದ್ಧ ಪರಿಣಾಮಕಾರಿ ಕಾರ್ಯಾಚರಣೆಗಾಗಿ ಯುದ್ಧ ಪೈಲಟ್, ಗ್ರೂಪ್ ಕ್ಯಾಪ್ಟನ್ ರಂಜೀತ್ ಸಿಂಗ್ ಸಿಧು ಅವರಿಗೆ ವೀರ ಚಕ್ರವನ್ನು ನೀಡಲಾಗಿದೆ. ಗ್ರೂಪ್ ಕ್ಯಾಪ್ಟನ್ ಅನಿಮೇಶ್ ಪಟ್ನಿ, ವಾಯುನೆಲೆಯಿಂದ ಕಾರ್ಯತಂತ್ರದ ಸರ್ಫೇಸ್ ಟು ಏರ್ ಮಿಸೈಲ್‌ಗಳನ್ನು ಹಾರಿಸಿದ್ದರು.

ಅವರ ನಿಖರವಾದ ಗುರಿಗಳು, ದೇಶದ ಸಂಪನ್ಮೂಲಗಳಿಗೆ ಯಾವುದೇ ಹಾನಿಯನ್ನುಂಟು ಮಾಡದೆ ಶತ್ರುಗಳಿಗೆ ಅಪಾರ ಹಾನಿಯನ್ನುಂಟು ಮಾಡಿತು. ಅವರಿಗೆ ವೀರ ಚಕ್ರ ನೀಡಲಾಗಿದೆ. ಇದಕ್ಕೂ ಮೊದಲು, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಶಸ್ತ್ರ ಪಡೆಗಳು ಮತ್ತು ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಸಿಬ್ಬಂದಿಗೆ ೧೨೭ ಶೌರ್ಯ ಪ್ರಶಸ್ತಿಗಳು ಮತ್ತು ೪೦ ವಿಶಿಷ್ಟ ಸೇವಾ ಪ್ರಶಸ್ತಿಗಳನ್ನು ಅನುಮೋದಿಸಿದರು.

><><><><

ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಮತ್ತು ಅಂತಿಮ ಹಂತದ ೧೨೨ ವಿಧಾನಸಭಾ ಕ್ಷೇತ್ರಗಳಿಗೆ ನಿನ್ನೆ ನಾಮಪತ್ರಗಳ ಪರಿಶೀಲನೆ ಕಾರ್ಯ ಪೂರ್ಣಗೊಂಡಿತು. ಈ ಪ್ರಕ್ರಿಯೆಯಲ್ಲಿ, ಪೂರ್ವ ಚಂಪಾರಣ್ ಜಿಲ್ಲೆಯ ಸುಗೌಲಿ ವಿಧಾನಸಭಾ ಕ್ಷೇತ್ರದ ವಿಕಾಸಶೀಲ್ ಇನ್ಸಾನ್ ಪಕ್ಷದ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಲಾಯಿತು. ಎರಡನೇ ಹಂತದಲ್ಲಿ, ಮುಂದಿನ ತಿಂಗಳು ೧೧ ರಂದು ಮತದಾನ ನಡೆಯಲಿದೆ. ನಾಮಪತ್ರಗಳನ್ನು ಹಿಂಪಡೆಯಲು ಅಕ್ಟೋಬರ್ ೨೩ ಕೊನೆಯ ದಿನಾಂಕವಾಗಿದೆ.

><><><><

ಪ್ರಾದೇಶಿಕ ಸಂಪರ್ಕ ಯೋಜನೆ - ಉಡೇ ದೇಶ್ ಕಾ ಆಮ್ ನಾಗರಿಕ್- ಉಡಾನ್, ಕಳೆದ ಒಂಬತ್ತು ವರ್ಷಗಳಲ್ಲಿ ೩.೨೩ ಲಕ್ಷ ವಿಮಾನಗಳ ಮೂಲಕ ೧.೫೬ ಕೋಟಿಗೂ ಹೆಚ್ಚು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಹೇಳಿದೆ. ರಾಷ್ಟ್ರೀಯ ನಾಗರಿಕ ವಿಮಾನಯಾನ ನೀತಿಯಡಿಯಲ್ಲಿ ಉಡಾನ್ ಯೋಜನೆಯನ್ನು ೨೦೧೬ ರ ಅಕ್ಟೋಬರ್ ೨೧ ರಂದು ಪ್ರಾರಂಭಿಸಲಾಯಿತು. ಈ ಯೋಜನೆಯಡಿಯಲ್ಲಿ, ೧೫ ಹೆಲಿಪೋರ್ಟ್‌ಗಳು ಮತ್ತು ೨ ಜಲ ವಿಮಾನ ನಿಲ್ದಾಣಗಳು ಸೇರಿದಂತೆ ೯೩ ವಿಮಾನ ನಿಲ್ದಾಣಗಳನ್ನು ಸಂಪರ್ಕಿಸುವ ೬೪೯ ಮಾರ್ಗಗಳನ್ನು ಕಾರ್ಯಗತಗೊಳಿಸಲಾಗಿದೆ. ಯೋಜನೆಯ ೯ನೇ ವಾರ್ಷಿಕೋತ್ಸವವನ್ನು ಗುರುತಿಸಲು ನವದೆಹಲಿಯಲ್ಲಿ ಆಯೋಜಿಸಲಾದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ನಾಗರಿಕ ವಿಮಾನಯಾನ ಕಾರ್ಯದರ್ಶಿ ಸಮೀರ್ ಕುಮಾರ್ ಸಿನ್ಹಾ, ಉಡಾನ್ ವಿಮಾನ ಪ್ರಯಾಣವನ್ನು ಕೈಗೆಟುಕುವ ಮತ್ತು ಸಾಮಾನ್ಯ ನಾಗರಿಕರಿಗೆ ಪ್ರವೇಶಿಸುವಂತೆ ಮಾಡುವ ಗುರಿಯನ್ನು ಹೊಂದಿರುವ ಪರಿವರ್ತನಾ ಉಪಕ್ರಮವಾಗಿದೆ ಎಂದು ಹೇಳಿದರು. ಗುಡ್ಡಗಾಡು, ಈಶಾನ್ಯ ಮತ್ತು ಮಹತ್ವಾಕಾಂಕ್ಷೆಯ ಪ್ರದೇಶಗಳೊಂದಿಗೆ ಸಂಪರ್ಕವನ್ನು ಕೇಂದ್ರೀಕರಿಸುವ ಹಾಗೂ ಸುಮಾರು ೧೨೦ ಹೊಸ ತಾಣಗಳ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುವ ವಿಸ್ತೃತ ಉಡಾನ್ ಯೋಜನೆಯ ಮೂಲಕ ೨೦೨೬ ರ ಏಪ್ರಿಲ್ ನಂತರವೂ ಯೋಜನೆಯನ್ನು ಮುಂದುವರಿಸುವ ಸರ್ಕಾರದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

><><><><

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಲ್ಕು ದಿನಗಳ ಕೇರಳ ಭೇಟಿಯಲ್ಲಿದ್ದಾರೆ. ಇಂದು ಅವರು ಶಬರಿಮಲೆ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆಯಲಿದ್ದಾರೆ. ನಾಳೆ ಅವರು, ತಿರುವನಂತಪುರಂನ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದು, ನಾರಾಯಣ ಗುರು ಸಮಾಧಿಯ ಶತಮಾನೋತ್ಸವ ಸಮಾರಂಭದಲ್ಲಿಯೂ ಭಾಗವಹಿಸಲಿದ್ದಾರೆ. ಇದರ ಜೊತೆಗೆ ರಾಷ್ಟ್ರಪತಿ, ಪಾಲಾದಲ್ಲಿ ಸೇಂಟ್ ಥಾಮಸ್ ಕಾಲೇಜು ಮತ್ತು ಎರ್ನಾಕುಲಂನಲ್ಲಿ ಸೇಂಟ್ ತೆರೇಸಾ ಕಾಲೇಜಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

><><><><

ಛಠ್ ಪೂಜೆಗೆ ಮುನ್ನ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ನವದೆಹಲಿ ರೈಲು ನಿಲ್ದಾಣಕ್ಕೆ ಭೇಟಿ ನೀಡಿ ಪ್ರಯಾಣಿಕರಿಗೆ ಲಭ್ಯವಿರುವ ವ್ಯವಸ್ಥೆಗಳು ಮತ್ತು ಸಿದ್ಧತೆಗಳನ್ನು ಪರಿಶೀಲಿಸಿದರು. ತಮ್ಮ ಭೇಟಿಯ ಸಮಯದಲ್ಲಿ, ಸಚಿವರು, ಹಲವಾರು ಪ್ರಯಾಣಿಕರೊಂದಿಗೆ ಸಂವಾದ ನಡೆಸಿದರು. ಮಾಧ್ಯಮಗಳೊಂದಿಗೆ ಮಾತನಾಡಿದ ಸಚಿವ ಅಶ್ವಿನಿ ವೈಷ್ಣವ್, ಈ ಹಬ್ಬದ ಋತುವಿನಲ್ಲಿ ಇದುವರೆಗೆ ಒಂದು ಕೋಟಿಗೂ ಹೆಚ್ಚು ಪ್ರಯಾಣಿಕರು ವಿಶೇಷ ರೈಲುಗಳಲ್ಲಿ ಪ್ರಯಾಣಿಸಿದ್ದಾರೆ. ೧.೨ ದಶಲಕ್ಷ ರೈಲ್ವೆ ನೌಕರರು ಹಗಲು-ರಾತ್ರಿ ಪ್ರಯಾಣಿಕರಿಗೆ ಸೇವೆ ಸಲ್ಲಿಸುವಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು. ದೆಹಲಿ ಪ್ರದೇಶದಲ್ಲಿ ಪ್ರತಿದಿನ ಸರಾಸರಿ ೪.೨೫ ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ ಎಂದು ಸಚಿವರು ಹೇಳಿದರು.

ಧ್ವನಿ: ಅಶ್ವಿನಿ ವೈಷ್ಣವ್ (೧೫ ಸೇಕೆಂಡ್)

><><><><

ಭಾರತೀಯ ನೌಕಾಪಡೆಯ ದ್ವೈವಾರ್ಷಿಕ ಕಮಾಂಡರ್‌ಗಳ ಸಮ್ಮೇಳನ ೨೦೨೫ ರ ಎರಡನೇ ಆವೃತ್ತಿಯು ಇಂದಿನಿಂದ ನವದೆಹಲಿಯಲ್ಲಿ ಪ್ರಾರಂಭವಾಗಲಿದೆ. 'ಆಪರೇಷನ್ ಸಿಂಧೂರ್' ಮತ್ತು ನೌಕಾಪಡೆಯ ಹೆಚ್ಚಿನ ಕಾರ್ಯಾಚರಣೆಗಳು ಮತ್ತು ಯುದ್ಧ ಸನ್ನದ್ಧತೆಯ ಹಿನ್ನೆಲೆಯಲ್ಲಿ ಮೂರು ದಿನಗಳ ಸಮ್ಮೇಳನವು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಸಮ್ಮೇಳನದ ಸಮಯದಲ್ಲಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಸಚಿವ ಸಂಪುಟ ಕಾರ್ಯದರ್ಶಿ ನೌಕಾ ಕಮಾಂಡರ್ ಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

><><><><

ಬೊಲಿವಿಯಾ ಅಧ್ಯಕ್ಷರಾಗಿ ಆಯ್ಕೆಯಾದ ರೊಡ್ರಿಗೋ ಪಾಜ್ ಪೆರೇರಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಮುಂಬರುವ ವರ್ಷಗಳಲ್ಲಿ ಹಂಚಿಕೆಯ ಪ್ರಗತಿ ಮತ್ತು ಸಮೃದ್ಧಿಗಾಗಿ ಭಾರತ-ಬೊಲಿವಿಯಾ ನಡುವಿನ ಪಾಲುದಾರಿಕೆಯನ್ನು ಇನ್ನಷ್ಟು ಬಲಪಡಿಸಲು ಎದುರು ನೋಡುತ್ತಿದ್ದೇನೆ. ಉಭಯ ದೇಶಗಳ ನಡುವಿನ ನಿಕಟ ಮತ್ತು ಸ್ನೇಹಪರ ಸಂಬಂಧಗಳು ಪರಸ್ಪರ ಪ್ರಯೋಜನಕಾರಿ ಸಹಕಾರವನ್ನು ದೀರ್ಘಕಾಲದಿಂದ ಬೆಂಬಲಿಸುತ್ತಿವೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪ್ರಧಾನಿ ಮೋದಿ ಹೇಳಿದ್ದಾರೆ.

><><><><

ಜಿಎಸ್‌ಟಿ ಸುಧಾರಣೆಗಳು ಮತ್ತು ಹೆಚ್ಚಿನ  ಗ್ರಾಹಕರ ಬೇಡಿಕೆಯಿಂದಾಗಿ ಭಾರತದಲ್ಲಿ ದೀಪಾವಳಿಯ ಮಾರಾಟ ಮೌಲ್ಯ ದೇಶಾದ್ಯಂತ ಸರಕುಗಳಲ್ಲಿ ೫ ಲಕ್ಷ ೪೦ ಸಾವಿರ ಕೋಟಿ ರೂಪಾಯಿ ಮತ್ತು ಸೇವೆಗಳಲ್ಲಿ ಸುಮಾರು ೬೫ ಸಾವಿರ ಕೋಟಿ ರೂಪಾಯಿಗಳನ್ನು ತಲುಪಿದೆ. ಇದು ದೇಶದ ಹಬ್ಬದ ಋತುವಿನ ಚಿಲ್ಲರೆ ಮತ್ತು ವ್ಯಾಪಾರ ಇತಿಹಾಸದಲ್ಲಿ ಇದುವರೆಗಿನ ಅತ್ಯಧಿಕ ವಹಿವಾಟನ್ನು ಸೂಚಿಸುತ್ತದೆ. ೨೦೨೪ ರ ನವರಾತ್ರಿಯಿಂದ ದೀಪಾವಳಿ ಅವಧಿಯವರೆಗಿನ ಹಬ್ಬದ ಮಾರಾಟ ಈ ಬಾರಿ ಶೇಕಡಾ ೨೫ ರಷ್ಟು ಹೆಚ್ಚಳವಾಗಿದೆ ಎಂದು ಅಖಿಲ ಭಾರತ ವ್ಯಾಪಾರಿಗಳ ಒಕ್ಕೂಟ ಸಿಎಐಟಿ ಯ ಸಂಶೋಧನೆ ಮತ್ತು ವ್ಯಾಪಾರ ಅಭಿವೃದ್ಧಿ ಸಂಘ ತಿಳಿಸಿದೆ. ಸಿಹಿತಿಂಡಿ ಗೃಹಾಲಂಕಾರ, ಪಾದರಕ್ಷೆಗಳು ಸಿದ್ಧ ಉಡುಪುಗಳು, ಬಾಳಿಕೆ ಬರುವ

ವಸ್ತುಗಳು ಮತ್ತು ದೈನಂದಿನ ಬಳಕೆಯ ವಸ್ತುಗಳಂತಹ ಪ್ರಮುಖ ಗ್ರಾಹಕ ಮತ್ತು ಚಿಲ್ಲರೆ ವಿಭಾಗಗಳಲ್ಲಿ ಜಿಎಸ್‌ಟಿ ದರಗಳಲ್ಲಿನ ಕಡಿತ, ಬೆಲೆ ಸ್ಪರ್ಧಾತ್ಮಕತೆಯನ್ನು ಗಮನಾರ್ಹವಾಗಿ ಸುಧಾರಿಸಿ, ಗ್ರಾಹಕ ಖರೀದಿಯನ್ನು ಹೆಚ್ಚಿಸಿದೆ ಎಂದು ವರದಿ ತಿಳಿಸಿದೆ.

><><><><

ಕೊಲಂಬೊದಲ್ಲಿ ನಿನ್ನೆ ರಾತ್ರಿ ನಡೆದ ಐಸಿಸಿ ಮಹಿಳಾ ವಿಶ್ವಕಪ್ ಕ್ರಿಕೆಟ್‌ನ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ, ಪಾಕಿಸ್ತಾನವನ್ನು ೧೫೦ ರನ್‌ಗಳಿಂದ ಪರಾಭವಗೊಳಿಸಿತು. ಮಳೆ ಬಾಧಿತ ಪಂದ್ಯದಲ್ಲಿ ಮರಿಜಾನ್ನೆ ಕಪ್ ಅವರ ಆಲ್‌ರೌಂಡ್ ಆಟ ಮತ್ತು ಲಾರಾ ವೋಲ್ವಾರ್ಡ್ ಅವರ ೬೦ ರನ್‌ಗಳು ದಕ್ಷಿಣ ಆಫ್ರಿಕಾ ತಂಡವು ಡಿಎಲ್‌ಎಸ್ ವಿಧಾನದ ಮೂಲಕ ಪಾಕಿಸ್ತಾನವನ್ನು ಸೋಲಿಸಲು ಸಹಾಯ ಮಾಡಿತು.

><><><><

ಭಾರತದ ಲಕ್ಷ್ಯ ಸೇನ್ ಫ್ರೆಂಚ್ ಓಪನ್ ಸೂಪರ್ ೭೫೦ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಐರ್ಲೆಂಡ್‌ನ ನಾಟ್ ನ್ಗುಯೆನ್ ವಿರುದ್ಧ ಮೊದಲ ಸುತ್ತಿನ ನೇರ ಪಂದ್ಯದಲ್ಲಿ ೭-೨೧, ೧೮-೨೧ ಅಂಕಗಳಿಂದ ಸೋತ ನಂತರ ಪಂದ್ಯಾವಳಿಯಿಂದ ನಿರ್ಗಮಿಸಿದರು.

><><><><

ಫಿಡೆ ಚೆಸ್ ವಿಶ್ವಕಪ್ ೨೦೨೫ ರ ಅಧಿಕೃತ ಲಾಂಛನ ಮತ್ತು ಗೀತೆಯನ್ನು ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್ ಬಿಡುಗಡೆ ಮಾಡಿದರು. ಜನಪ್ರಿಯ ಗಾಯಕ ದಲೇರ್ ಮೆಹಂದಿ ಹಾಡಿದ ಅಧಿಕೃತ ಗೀತೆ ಮತ್ತು ಗೋವಾ ಸಂಸ್ಕೃತಿ ಮತ್ತು ಚೆಸ್ ಆಟದಿಂದ ಪ್ರೇರಿತ ಲಾಂಛನವನ್ನು ಗೋವದಲ್ಲಿ ನಡೆದ ಸಮಾರಂಭದಲ್ಲಿ ಅನಾವರಣಗೊಳಿಸಲಾಯಿತು. ವಿದ್ಯಾರ್ಥಿಗಳಲ್ಲಿ ಗಮನ, ಚಿಂತನೆ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸುವಲ್ಲಿ ಚೆಸ್‌ನ ಮಹತ್ವವನ್ನು ಒತ್ತಿ ಹೇಳಿದ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ರಾಜ್ಯದಾದ್ಯಂತ ಶಾಲೆಗಳು ಮತ್ತು ಕಾಲೇಜುಗಳು, ವಿದ್ಯಾರ್ಥಿಗಳ ಕಲಿಕೆಯ ಭಾಗವಾಗಿ ಚೆಸ್ ಅನ್ನು ಪರಿಚಯಿಸುವಂತೆ ಕರೆ ನೀಡಿದರು.

><><><><